**O.S.No.163/2012 DW.1**

<u>ದಿಃ **02-03-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ. ಎಸ್ ಎಂ ಬಿ ರವರಿಂದಃ</u>

1. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ. ವಕೀಲರು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಸಹಿ ಪಡೆದಿರುತ್ತಾರೆ. ವಾದಿ ನಂ.3 ರವರು ತನ್ನ ಹಾಗೂ ತನ್ನ ಮಕ್ಕಳ ಪರವಾಗಿ ನಾನು ಜಮೀನು ಖರೀದಿಸಿದಕ್ಕಾಗಿ ಈ ದಾವೆ ಹೂಡಿರುತ್ತಾಳೆ. ಪ್ರತಿವಾದಿ ನಂ.1 ರವರು ವಾದಿ ನಂ.3 ರವರ ಗಂಡನಾಗಬೇಕು. ವಾದಿಯರು ಈ ದಾವೆಯನ್ನು ದಿಃ 02-03-2012 ರಂದು ಸಲ್ಲಿಸಿರುತ್ತಾರೆ ಎಂದರೆ ಸರಿ. ವಾದಿಯರು ಪ್ರತಿವಾದಿ ನಂ.1 ರವರ ವಿರುದ್ಧ ಈ ದಾವೆ ಸಲ್ಲಿಸಿರುವ ಸಂಗತಿ ನನಗೆ ಮೊದಲೇ ಗೊತ್ತಿತ್ತು ಎಂದರೆ ಸರಿ. ಈ ದಾವೆಯಲ್ಲಿ ದಾವಾ ಸ್ವತ್ತುಗಳ ಪರಭಾರೆ ಮಾಡಕೂಡದು ಎಂದು ತಾತ್ಕಾಲಿಕ ತಡೆಯಾಜ್ಞೆ ಆದೇಶವಾಗಿರುತ್ತದೆ ಎಂದರೆ ಸರಿ. ವಾದಿಯರಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಪ್ರತಿವಾದಿ ನಂ.1 ಮತ್ತು ನಾನು ಕೂಡಿಕೊಂಡು ಖೊಟ್ಟಿ ಕ್ರಯಪತ್ರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.